O.S.No. 16/2017 DW - 1 ಈಶ್ವರ ಸಿದ್ದನಾಳ

**(ದಿನಾಂಕ 25.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)**

**<u>ಮುಂದುವರೆದ ಪಾಟಿ ಸವಾಲುಃ ವಾದಿ ಪರ ಶ್ರೀ ಆರ್ ವಿ ಜೆ ವಕೀಲರಿಂದ –</u>**

1. ವಾದಿ ಕಂಡೀಶನ್ ಉಲ್ಲಂಘಿಸಿ ಕಟ್ಟಿದ್ದಾರೆ ಎಂದು ನಾನು ಅವರಿಗೆ ನೋಟಿಸ ಕೊಟ್ಟಿಲ್ಲ, ಅ ಪಿರಿಯಡ್ ನಲ್ಲಿ ನಾನು ಇಲ್ಲಿ ಕೆಲಸ ಮಾಡುತ್ತಿರಲಿಲ್ಲ. ಅತಿಕ್ರಮಣ ಮಾಡಿ ಕಟ್ಟಿದ್ದಾರೆ ಎಂದು ತೋರಿಸಲುನಮ್ಮ ಕಚೇರಿಯಲ್ಲಿ ಏನಾದರೂ ದಾಖಲೆ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿ ನಾವು ಅಲ್ಲಿ ಹೋಗಿ ನೋಡಿದಾಗ ಆತ ಅತಿಕ್ರಮಣ ಮಾಡಿ ಕಟ್ಟಿರುವುದು ಕಂಡುಬಂತು. ಎಷ್ಟು ಅಡಿ ಅತಿಕ್ರಮಣ ಆಗಿದೆ ಎಂದು ಏನಾದರೂ ನೋಟ್ ಮಾಡಿದ್ದೀರಾ ಎಂದರೆ ಸಾಕ್ಷಿ ನಾವು ಸಿಟಿ ಸರ್ವೇ ಅಧಿಕಾರಿಗಳಿಗೆ ಪತ್ರ ಬರೆದು ಅಳತೆ ಮಾಡಿಸಿದ್ದು, ಅವರ ವರದಿ ಪ್ರಕಾರ 50 ಚೌರಾಸ ಮೀಟರ್ ಅತಿಕ್ರಮಣ ಆಗಿರುವುದು ಕಂಡುಬಂದಿದೆ ಎಂದು ಹೇಳುತ್ತಾರೆ. ದಿಃ 04.05.2016 ರಲ್ಲಿ ಅತಿಕ್ರಮಣ ಮಾಡಿ ಕಟ್ಟಿರುತ್ತಾರೆ. ಅತಿಕ್ರಮಣ ತೆರೆವುಗೊಳಿಸಬೇಕಾದರೆ ನೋಟಿಸ ಕೊಡಬೇಕು ಎಂದರೆ ನಿಜ. ಯಾವ ದಿನ ನೋಟಿಸ್ ಕೊಟ್ಟಿದ್ದೆವು ಎಂದರೆ 11.05.2016ರಂದು ನೋಟಿಸ ಕೊಟ್ಟಿದ್ದೆವು. ನೋಟಿಸ್ ನ ಆಪಿಸ್ ಕಾಪಿ ನಮ್ಮ ಬಳಿ ಇದೆ ಎಂದರೆ ನಿಜ. ಆ ನೋಟಿಸ್ ಕಾಪಿ ನಮ್ಮ ಬಳಿ ಇದೆಯಾ ಎಂದರೆ ಇದ ಎಂದು ಹೇಳುತ್ತಾರೆ. ಈಗಾಗಲೇ ನನಗೆ ನ್ಯಾಯಾಲಯದಿಂದ specific ಆಗಿ ಕಾಗದ ಪತ್ರ ನೋಡಿಕೊಂಡು ಬಂದು ಸಾಕ್ಷಿ ಹೇಳಲು ನೋಟಿಸ್ ಕೊಟ್ಟಿದ್ದಾರೆ ಎಂದರೆ ನಿಜ. ಹುಕ್ಕೇರಿಯಲ್ಲಿ ವಾದಿಯನ್ನು ಹೊರತುಪಡಿಸಿ ಬೇರೆ ಯಾರನ್ನೂ ಅತಿಕ್ರಮಣ ಮಾಡಿರುವ ಬಗ್ಗೆ ನಾವು ಫೈಲ್ ಅನ್ನು ಮೈಂಟೇನ್ ಮಾಡಿದ್ದೀರಾ ಎಂದರೆ ಯಾವುದು ಮಾಡಿಲ್ಲ ಎಂದು ಹೇಳುತ್ತಾರೆ. ಬೇರೆ ಅತಿಕ್ರಮಣ ಮಾಡಿದ ಬಗ್ಗೆ ನಮ್ಮಲ್ಲಿ ಮಾಹಿತಿ ಇಲ್ಲ.

2. ಈ ದಾವೆಯಲ್ಲಿ ಕೋರ್ಟ್ ನಿಂದ ಜಾಗ ಅಳತೆ ಮಾಡಿಕೊಂಡು ಬರಲು ಕಮೀಷನರ್ ನೇಮಕ ಆಗಿದ್ದರು ಎಂದರೆ ನಿಜ. ಕೋರ್ಟ್ ನಿಂದ ಕೆ.ಬಿ.ಕುರಬೆಟ್ ವಕೀಲರನ್ನು 20.06.2023 ರಂದು ಆ ಸ್ಥಳವನ್ನು ನಮ್ಮ ಮತ್ತು ನಮ್ಮ ಸಿಬ್ಬಂದಿ ಸಮಕ್ಷಮ ಪರಿಶೀಲನೆ

ಮಾಡಿ ಪೊಟೋ ತೆಗೆದರು ಎಂದರೆ ನಿಜ. ಸದರಿ ಪೋಟೋಗಳನ್ನು ನ್ಯಾಯಾಲಯದ ಕಡತದಿಂದ ತೋರಿಸಲಾಗಿ ಅದನ್ನು ಸಾಕ್ಷಿ ನೋಡಿ ಒಪ್ಪಿದ್ದು ಅದನ್ನು ನಿ.ಪಿ-9 ರಿಂದ ನಿ.ಪಿ-25 ಎಂದು ಗುರುತಿಸುವ ಉದ್ದೇಶಕ್ಕಾಗಿ ಮಾತ್ರ ನಿಶಾನೆಗೊಳಪಡಿಸಲಾಯಿತು. ನಿಪಿ-11, ನಿಪಿ-12, ನಿಪಿ-13 ರಲ್ಲಿ ಕಾಣುವ ಪೋಟೋಗಳಲ್ಲಿ ಆ ಸಮಯದ ಚೀಪ್ ಆಫಿಸರ್ ಮೋಹನ್ ಜಾಧವ್ ಇದ್ದರು ಎಂದರೆ ನಿಜ. ನಾನು ಕಮೀಷನರ್ ರೀಪೋರ್ಟ ನೋಡಿಲ್ಲ. ನಾನು ಕೋರ್ಟ ಕಮೀಷನರ್ ರೀಪೋರ್ಟ ನೋಡಿ ಅದಕ್ಕೆ ತಕರಾರು ಹಾಕಿದ್ದೇನೆ, ಆದರೂ ಸಹ ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಮ್ಮ ವಕೀಲರಿಗೆ ನಮ್ಮ ಪರವಾಗಿ ತಕರಾರು ಹಾಕಲು ಮತ್ತು ಕೇಸ್ ನಡೆಸಲು ಅಧಿಕಾರ ಕೊಟ್ಟಿದ್ದೇನೆ ಎಂದರೆ ನಿಜ. (ಈ ಸಮಯದಲ್ಲಿ ಪ್ರತಿವಾದಿ ಪರ ವಕೀಲರು ಪೋಟೋಗಳನ್ನು ಸಾಕ್ಷಿಗೆ ತೋರಿಸಲು ಬರುವುದಿಲ್ಲ, ಅವು ಕೋರ್ಟ ಕಮೀಷನರ್ ರೀಪೋರ್ಟ ಜೊತೆ ಹಾಕಿದ ಪೋಟೋಗಳಾಗಿದ್ದರಿಂದ ಅವುಗಳನ್ನು ತೋರಿಸಬಾರದೆಂದು ತಕರಾರು ತೆಗೆದಿರುತ್ತಾರೆ. ಆದರೆ ಪಾಟೀ ಸವಾಲಿನಲ್ಲಿ ಸಾಕ್ಷಿಗೆ ಆ ಪೋಟೋಗಳನ್ನು ತೋರಿಸಿದಾಗ ಸಾಕ್ಷಿ ಅದನ್ನು ನೋಡಿ ಒಪ್ಪಿ ದ್ದರಿಂದ ಪ್ರತಿವಾದಿ ಪರ ವಕೀಲರ ಮನವಿಯನ್ನು ತಿರಸ್ಕರಿಸಲಾಯಿತು. ಸದರಿ ದಾಖಲೆಗಳನ್ನು ಗುರುತಿಸುವ ಉದ್ದೇಶಕ್ಕಾಗಿ ಮಾತ್ರ ನಿಶಾನೆಗೊಳಪಡಿಸಲಾಗಿದೆ.) ಪೋಟೋದಲ್ಲಿ ರಸ್ತೆ ಕಾಣುವುದಿಲ್ಲ ಎಂದರೆ ಸಾಕ್ಷಿ ರಸ್ತೆ ಅತಿಕ್ರಮಣ ಮಾಡಿ ತೆರವುಗೊಳಿಸಿದ ಕುರುಹು ಕಾಣುತ್ತಿದೆ ಎಂದು ಹೇಳುತ್ತಾರೆ.

3. ಸದರಿ ದಾವಾ ಜಾಗದ ಪೂರ್ವಕ್ಕೆ ಗಟರ್ ಇದ್ದು ಅದರ ಪೂರ್ವಕ್ಕೆ ಯಾರ ಜಾಗ ಇದೆ ಎಂದರೆ ಸಾಕ್ಷಿ ಸಿಟಿ ಸರ್ವೆ ನಂಬರ್ 127 ಎಸ್ ಕೆ ಹೈಸ್ಕೂಲ್ ಇದೆ ಎಂದು ಹೇಳುತ್ತಾರೆ. ಅತಿಕ್ರಮಣ ತೆರವುಗೊಳಿಸುವ ಬಗ್ಗೆ 21.09.2016 ರಂದು ಠರಾವು ಆಗಿದೆ ಎಂದರೆ ನಿಜ. ಎಸ್ ಕೆ ಹೈಸ್ಕೂಲ್ ನವರು ತಾವು ತಮ್ಮ ಜಾಗವನ್ನು ಅಳತೆ ಮಾಡಿಸಿ ನಂತರ ಅತಿಕ್ರಮ ಇದ್ದರೆ ತೆರವು ಮಾಡುವುದಾಗಿ ತಿಳಿಸಿದ್ದಾರೆ ಎಂದು ನಿ.ಡಿ-7 ರಲ್ಲಿ ಇದೆ ಎಂದರೆ ನಿಜ. ಈ ಬಗ್ಗೆ ಮತ್ತೊಮ್ಮೆ ಎಸ್ ಕೆ ಹೈಸ್ಕೂಲ್ ಮೋಜಣಿ ಆಯಿತೊ ಇಲ್ಲವೊ ಎಂದರೆ ಮೋಜಣಿಆಗಿತ್ತು ಎಂದು ಹೇಳುತ್ತಾರೆ. ಈ ಬಗ್ಗೆ ಟೌನ್ ಮುನ್ಸಿಪಲ್ ಕೌನ್ಸಿಲ್ ನಿಂದ ಇದುವರೆಗೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ನಮಗೆ ಬೇಕಾದರ ವಿರುದ್ಧ ಕ್ರಮ

ತೆಗೆದುಕೊಳ್ಳುವುದಿಲ್ಲ, ಬೇಡವಾದವರ ವಿರುದ್ಧ ಕ್ರಮತೆಗೆದುಕೊಳ್ಳುತ್ತೇವೆ ಎಂದರೆ ಎಲ್ಲರ ಮೇಲೂ ಕ್ರಮ ತೆಗೆದುಕೊಳ್ಳುತೇವೆ ಎಂದು ಹೇಳುತ್ತಾರೆ.

4. ವಾದಿಯ ಮನೆಯ ಪೂರ್ವ ವಾದಿಗೆ ಸೇರಿದ ದಕ್ಷಿಣೋತ್ರ ಕಾಂಪೌಂಡ್ ಇದೆ ಎಂದರೆ ನಿಜ. ವಾದೀಯ ಮನೆಯ ದಕ್ಷಿಣಕ್ಕ ಸಿ ಟಿಎಸ್ 186ಎ/3 ಹಾಗೂ ಅದರ ದಕ್ಷಿಣಕ್ಕೆ ಸಿಟಿಎಸ್ 186ಬಿ/1 ಇರುತ್ತದೆ. ಈ ಎರಡೂ ಜಾಗದಲ್ಲಿ ಅತಿಕ್ರಮಣ ಮಾಡಿದ್ದಾರೆ ಎಂದು ರಿಪೋರ್ಟ ಇದೆ ಎಂದರೆ ನಿಜ. ಅದನ್ನು ನಾವು ತೆರವುಗೊಳಿಸಿಲ್ಲ. 11.05.2016 ರಂದು ಈ ಮೇಲೆ ಹೆಳಿದ 4 ಜನರಿಗೂ ನೊಟಿಸ್ ಕೊಟ್ಟಿದ್ದೇವೆ, ಆ ಬಗ್ಗೆ ದಾಖಲೆ ಹಾಜರುಮಾಡುತ್ತೇವೆ. ಯಾವ ದಿನ ತೆರವುಗೊಳಿಸಲು ಹೋಗಿದ್ದೆವು ಎಂದು ನನಗೆ ಗೊತ್ತಿಲ್ಲ, ನಾನು ಇರಲಿಲ್ಲ. ನಮ್ಮ ಕಚೇರಿಯಲ್ಲಿ ಆ ಬಗ್ಗೆ ನೋಟ್ ಇದೆಯೋ ಇಲ್ಲವೊ ಆ ಬಗ್ಗೆ ನನಗೆ ಮಾಹಿತಿ ಇಲ್ಲ. ಯಾರು ಯಾರು ಹೋಗಿದ್ದರು, ಏನು ತೆಗೆದುಕೊಂಡು ಹೋಗಿದ್ದರು ಎಂದು ನನಗೆ ಮಾಹಿತಿ ಇಲ್ಲ. ಆ ಬಗ್ಗೆ ನಾನು ಚೌಕಾಶಿ ಮಾಡಿಲ್ಲ. ಆ ರೆಕಾರ್ಡ್ ನೋಡಿಲ್ಲ. ಸಿಟಿಎಸ್ 186ಬಿ/1 ರಲ್ಲಿ ದತ್ತ ಮಂದಿರ ಇದೆ ಎಂದರೆ ನಿಜ. ವಾದಿಯ ಕಾಂಪೌಂಡಿನಿಂದ ಗಟರ್ ಎಷ್ಟು ದೂರದಲ್ಲಿ ಇದೆ ಎಂದು ಅಳತೆ ಮಾಡಿಲ್ಲ. ಗಟರ್ ನಿಂದ ಎಸ್ ಕೆ ಹೈಸ್ಕೂಲ್ ಕಾಂಪೌಂಡ್ ಎಷ್ಟು ದೂರದಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ವಾದಿ ಪೂರ್ವ-ಪಶ್ಚಿಮ ಉತ್ತರ ದಕ್ಷಿಣ ಎಷ್ಟು ಮೀಟರ್ ಅತಿಕ್ರಮಣ ಮಾಡಿದ್ದಾರೆ ಎಂದು ನನಗೆ ಸ್ಪಷ್ಟವಾಗಿ ಗೊತ್ತಿಲ್ಲ, ಎಡಿಎಲ್ಆರ್ ವರದಿಯನ್ನು ಹಾಜರು ಮಾಡಿದ್ದು ಅದರಲ್ಲಿ ನಮೂದು ಇದೆ ಎಂದು ಹೇಳುತ್ತಾರೆ. ನಾನು ನಮ್ಮ ಸಿಬ್ಬಂದಿಗ ಮೂಲಕ ಹೋಗಿ ಎಷ್ಟು ಅತಿಕ್ರಮಣ ಆಗಿದೆ ಎಂದು ಮಾಪ ಮಾಡಿಲ್ಲ.

5 ವಾದಿಯು ಅತಿಕ್ರಮಣ ಮಾಡಿಲ್ಲ ಎಂದು ನನಗೆ ಸ್ಪಷ್ಟವಾಗಿ ಗೊತ್ತಾಗಿದೆ ಎಂದರೆ ಸರಿಯಲ್ಲ. ಪುರಸಭೆಯಿಂದ ಅತಿಕ್ರಮಣ ಆದ ಬಗ್ಗೆ ಪೋಟೋ ತೆಗೆದಿಲ್ಲ. ದಾವಾ ಆಸ್ತಿ ಅಕ್ಕ ಪಕ್ಕ ಸ್ಥಿತಿಗತಿ ಕಾಣುವ ಹಾಗೆ ಬಗ್ಗೆ ಪುರಸಭೆಯಿಂದ ಪೋಟೋ ತೆಗೆದಿರುವುದಿಲ್ಲ. ಪುರಸಭೆಯಿಂದ ಪೋಟೋ ವಗೈರೆಯನ್ನು ನ್ಯಾಯಾಲಯಕ್ಕೆ ಹಾಜರುಮಾಡಿಲ್ಲ. ನನ್ನ ಪ್ರಮಾಣಪತ್ರದಲ್ಲಿ ಪೋಟೋ ಹಾಜರು ಮಾಡಿದ್ದೇನೆ ಎಂದು ಬರೆದಿಲ್ಲ.

6. ಸದರಿ ರಸ್ತೆ ಜಿಲ್ಲಾ ಪಂಚಾಯ್ತಿಗೆ ಸೇರಿದ್ದು, ಅದನ್ನು ತೆರವುಗೊಳಿಸಲು ನಮಗೆ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಜಿಲ್ಲಾ ಪಂಚಾಯ್ತಿ ಇಂದ ತೆರವು ಮಾಡಿ ಎಂದು ನಮಗೆ ಮನವಿ ಮಾಡಿಲ್ಲ. ಪುರಸಭೆ ಸದಸ್ಯರು ತಮಗೆ ಬೇಕಾದ ರೀತಿಯಲ್ಲಿ ಠರಾರವು ಮಾಡುತ್ತಾರೆ ಎಂದರೆ ಸಾಕ್ಷಿ ಸಾರ್ವಜನಿಕ ಹಿತದೃಷ್ಟಿಯಿಂದ ಠರಾವು ಪಾಸು ಮಾಡುತ್ತಾರೆ ಎಂದು ಹೇಳುತ್ತಾರೆ. ಠರಾವು ಆದ ನಂತರವೂ ಸಹ ನಾನು ಪುರಸಭೆಯಿಂದ ಆ ಜಾಗ ನೋಡಿಲ್ಲ ಎಂದರೆ ಸರಿಯಲ್ಲ. ಹಿಂದಿನ ಮುಖ್ಯಸ್ಥರು ಸಹ ನೋಡಿದ್ದಾರೆ. ಅಲ್ಲಿ ಹೋಗಿ ನೋಡಿದ ಬಗ್ಗೆ ಪುರಸಭೆಯಲ್ಲಿ ದಾಖಲೆ ಇರುವುದಿಲ್ಲ. ಪುರಸಭೆಯವರು ಅಲ್ಲಿ ಹೋಗಲ್ಲ ಮತ್ತು ನೋಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ನಾನು ಈ ನ್ಯಾಯಾಲಯದಲ್ಲಿ ಪುರಸಭೆಯಿಂದ ಹಾಕಿದ ತಕರಾರನ್ನುಓದಿ ತಿಳಿದು ಕೊಂಡಿದ್ದೇನೆ. ವಾದಿಗೆ ತೊಂದರೆ ಕೊಡಬೇಕು ಎಂದು ನಾನು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪುರಸಭೆಯ ಸದಸ್ಯರಿಗೆ ಖುಷಿ ಪಡಿಸಬೇಕೆಂಬ ಉದ್ದೇಶದಿಂದ ಈ ರೀತಿ ಮಾಡಿದ್ದೇವೆ ಎಂದರೆ ಸರಿಯಲ್ಲ. ವಾದಿಯರು ಅನೇಕ ಬಾರಿ ನಮಗೆ ಅರ್ಜಿ ಕೊಟ್ಟು ಕಾಗದ ಪತ್ರ ಕೊಡಿ ಎಂದು ಕೇಳಿದ್ದ ಎಂದರೆ ನನಗೆ ಮಾಹಿತಿ ಇಲ್ಲ. ನಾನು ವಾದಿಗೆ ಉದ್ದೇಶಪೂರ್ವಕವಾಗಿ ಯಾವುದೇ ಕಾಗದ ಪತ್ರವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

ಸಹಿ/-

**(ಆದಿತ್ಯ ಆರ್. ಕಲಾಲ್)**

**ಸಿ ಜೆ ಮತ್ತು ಜೆ.ಎಂ.ಎಫ್.ಸಿ, ಹುಕ್ಕೇರಿ.**